155ನೇ 6 ನಿ:72 = (119) 4KK 2507

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜ ರವರು ನಿಯಮ 72ರಡಿ ಗಮನ ಸೆಳೆದಿರುವ ಸೂಚನೆಗೆ ಸರ್ಕಾರದ ಹೇಳಿಕೆ:-**

**ಸೂಚನೆ:-**

ಕರ್ನಾಟಕ ರಾಜ್ಯದ ಬಹಳ ಪುರಾತನವಾದ (ಸ್ವಾತತ್ರ್ಯ ಪೂರ್ವದ ಶ್ರದ್ಧಾ ಕೇಂದ್ರಗಳು ದೇವಸ್ಥಾನ, ಬಸದಿ, ಚರ್ಚ್, ಸ್ಮಶಾನ, ಶಾಲೆ ಹಾಗೂ ಮಸೀದಿ) ಇವುಗಳ ಕಂದಾಯ ಇಲಾಖೆಯ ಆರ್ ಟಿ ಸಿ ನಲ್ಲಿ ಕಾಲಂ ಸಂಖ್ಯೆ-9ರಲ್ಲಿ ಸರ್ಕಾರ ಎಂದು ಹಾಗೂ ಕಾಲಂ ಸಂಖ್ಯೆ-11ರಲ್ಲಿ ದೇವಸ್ಥಾನ, ಬಸದಿ, ಚರ್ಚ್, ಸ್ಮಶಾನ, ಶಾಲೆ ಹಾಗೂ ಮಸೀದಿ ಎಂಬಿತ್ಯಾದಿ ಹಕ್ಕನ್ನು ಸರ್ಕಾರವು ನೀಡಿರುತ್ತದೆ. ಇದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಪುರಾತನವಾದ ಶ್ರದ್ಧಾ ಕೇಂದ್ರಗಳಿಗೆ ಶಾಲೆಗಳಿಗೆ ಜನರಿಂದ ತೊಂದರೆ ಆಗುತ್ತದೆ.

ಆದರಿಂದ ಆರ್ ಟಿ ಸಿ ಯ 9ನೇ ಕಾಲಂ ನಲ್ಲಿ ಸರ್ಕಾರ ಎಂಬ ಹಕ್ಕನ್ನು ತೆಗೆದು 11ನೇ ಕಾಲಂನಲ್ಲಿ ಹಕ್ಕು ಯಾರಿಗೆ ಇದೆ ಅದನ್ನೇ 9ನೇ ಕಾಲಂ ನಲ್ಲಿ ನಮೂದಿಸಿ, ಸೂಕ್ತ ನಿರ್ದೇಶನ ನೀಡುವುದು ಅವಶ್ಯಕತೆ ಇದೆ. ಇದರಿಂದ ಕರ್ನಾಟಕ ರಾಜ್ಯದ ಎಲ್ಲಾ ದೇವಸ್ಥಾನ, ಬಸದಿ, ಚರ್ಚ್, ಸ್ಮಶಾನ, ಶಾಲೆ ಮತ್ತು ಮಸೀದಿ ಎಂಬಿತ್ಯಾದಿ ಜಾಗದ ಸಮಸ್ಯೆಯು ಪರಿಹಾರವಾಗಲಿದೆ. ಈ ವಿಚಾರವು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿದ್ದು, ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:-**

1. ಪಹಣಿ ಕಲಂ-9 ರಲ್ಲಿ ಜಮೀನಿನ ಖಾತೆದಾರರು/ ಹಕ್ಕುದಾರರ ಹೆಸರನ್ನು ನಮೂದಿಸಲು ಅವಕಾಶವಿರುತ್ತದೆ. ಸದರಿ ಖಾತೆದಾರರು/ಹಕ್ಕುದಾರರಿಗೆ ಜಮೀನಿನ ಬಗ್ಗೆ ಇರುವ ಇತರೆ ಹಕ್ಕುಗಳನ್ನು ಮತ್ತು ಋಣಗಳನ್ನು ಪಹಣಿ ಕಾಲಂ-11 ರಲ್ಲಿ ನಮೂದಿಸಲಾಗಿರುತ್ತದೆ.

2. ಸ್ವಾತಂತ್ರ್ಯ ಪೂರ್ವದ ಶ್ರದ್ಧಾ ಕೇಂದ್ರ ಗಳು ದೇವಸ್ಥಾನ, ಬಸದಿ, ಚರ್ಚ್, ಸ್ಮಶಾನ, ಶಾಲೆ ಹಾಗೂ ಮಸೀದಿಗಳು ಸರ್ಕಾರದಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಮಂಜೂರಾಗಿದ್ದಲ್ಲಿ ಸದರಿ ವಿವರಗಳನ್ನು ಪಹಣಿ ಕಾಲಂ 9 ರಲ್ಲಿ ನಮೂದಿಸಲು ಅವಕಾಶವಿರುತ್ತದೆ.

3. ಪಹಣಿ ಕಾಲಂ 11 ರಲ್ಲಿನ ನಮೂದುಗಳು ಸದರಿ ಜಮೀನಿನಲ್ಲಿ ಪಹಣಿ ಕಾಲಂ 9 ರಲ್ಲಿರುವ ಹಕ್ಕುದಾರರಿಗೆ ಇರುವ ಇತರೆ ಹಕ್ಕುಗಳು ಮತ್ತು ಋಣಗಳನ್ನು ಮಾತ್ರ ವಿವರಿಸುವುದರಿಂದ, ಸಕ್ಷಮ ಪ್ರಾಧಿಕಾರದ ಮಂಜೂರಿ ಆದೇಶವಿಲ್ಲದೆ ಸದರಿ ಕಾಲಂ-11 ರಲ್ಲಿ ನಮೂದಿರುವಂತೆ ಕಾಲ-9 ರಲ್ಲಿ ಹಕ್ಕು ದಾಖಲಿಸಲು ಅವಕಾಶವಿರುವುದಿಲ್ಲ.

**RD 150 MRR 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು